# ಎಸ್‌ಎಸ್‌ಎಲ್‌ಸಿ ಪರೀಕ್ಷೆ ಎದುರಿಸುವುದು ಹೇಗೆ?



ಎಸ್.ಎಸ್.ಎಲ್.ಸಿ. ಓದುತ್ತಿರುವ ನೀವು ಬುದ್ಧಿವಂತರೂ, ಸತತ ಶ್ರಮಪಟ್ಟು ಓದುವವರೂ, ಶಾಲೆಯಲ್ಲಿ ಕೇಳಿದ ಪಾಠವನ್ನು ಮನನ ಮಾಡಿಕೊಳ್ಳುವ ಚುರುಕುಮತಿಗಳಾಗಿದ್ದರೂ ಎಲ್ಲೋ ಒಂದು ಕಡೆ ನಿಮ್ಮನ್ನು ಭಯ ಕಾಡುತ್ತಿರುತ್ತದೆ. ಎಲ್ಲಿ ಫೇಲಾಗುವೆನೊ, ಕಡಿಮೆ ಅಂಕಗಳಿಸುವೆನೊ ಎಂಬ ಆತಂಕ ಸುಳಿಯುತ್ತಿರುತ್ತದೆ. ಆದರೆ ಪ್ರಿಯ ವಿದ್ಯಾರ್ಥಿ / ವಿದ್ಯಾರ್ಥಿನಿಯರೇ ಆತಂಕ ಬಿಡಿ, ಸರಿಯಾಗಿ ಓದುವುದು ಹಾಗೂ ಪರೀಕ್ಷೆಗೆ ತಯಾರಾಗುವುದು ಒಂದು ಕಲೆ.ಪರೀಕ್ಷೆಯಲ್ಲಿ ಜಯಶೀಲರಾದವರೆಲ್ಲರೂ, ಅತೀ ಬುದ್ಧಿವಂತರಾಗಲೀ, ಸಜಶೀಲರಾಗಲೀ ಆಗಿರಬೇಕೆಂದು ಏನೂ ಇಲ್ಲ. ಅವರ ಯಶಸ್ಸಿಗೆ ಅವಿಶ್ರಾಂತವಾಗಿ ಅವರು ನಡೆಸಿರುವ ಅಧ್ಯಯನ ಕ್ರಮ ಒಂದು ಮುಖ್ಯ ಕಾರಣ

ಜ್ಞಾನ ಸಂಪಾದನೆಗಾಗಿ ಅಧ್ಯಯನ ಮಾಡುವುದು ಎಷ್ಟು ಮುಖ್ಯವೋ, ಪರೀಕ್ಷೆಯಲ್ಲಿ ಯಶಸ್ವಿಯಾಗುವುದಕ್ಕಾಗಿ ಅಧ್ಯಯನ ಮಾಡುವುದು ಅಷ್ಟೇ ಮುಖ್ಯ. ಯಶಸ್ಸಿನ ರಹಸ್ಯವಿರುವುದು ಏಕಾಗ್ರತೆಯಲ್ಲಿ. ಯಾವುದೇ ಕೆಲಸ ಮಾಡುವುದಕ್ಕೂ ಏಕಾಗ್ರತೆ ಅತೀ ಮುಖ್ಯ. ಉದಾಹರಣೆಗೆ, ಕಮ್ಮಾರನ ಸುತ್ತಿಗೆ ದಾರಿ ತಪ್ಪಿದರೆ, ಕೈ ಪೆಟ್ಟಾಗುವ ಸಂಭವವಿರುತ್ತದೆ. ಕ್ಷೌರಿಕನ ಕತ್ತಿ ಸ್ವಲ್ಪ ಕೈ ಜಾರಿದರೂ ಚರ್ಮ ಕತ್ತರಿಸಿ ಅನಾಹುತವಾಗುತ್ತದೆ. ಸತತ ಅಭ್ಯಾಸ, ವತ್ತಿ ನಿಪುಣತೆ, ತನ್ಮಯತೆಯಿಂದಾಗಿ ಅವರಲ್ಲಿ ಏಕಾಗ್ರತೆ ಲಭಿಸಿರುತ್ತದೆ

ವಿದ್ಯಾರ್ಥಿಗಳಿಗೂ ಸಹ ಇದೇ ರೀತಿಯ ಅಥವಾ ಅದಕ್ಕೂ ಹೆಚ್ಚಿನ ಏಕಾಗ್ರತೆ ಅತೀ ಮುಖ್ಯ. ಓದಿನಲ್ಲಿ ತನ್ಮಯತೆ ಮತ್ತು ಸತತ ಅಭ್ಯಾಸದಿಂದ ಏಕಾಗ್ರತೆಯನ್ನು ಪಡೆದುಕೊಳ್ಳಬಹುದು. ಇದರಿಂದಾಗಿ ಆತ್ಮವಿಶ್ವಾಸ ಹೆಚ್ಚುತ್ತದೆ. ಹೆದರಿಕೆ ಹೋಗುತ್ತದೆ.

ಈ ಎಲ್ಲಾ ಸೂಚನೆಗಳೊಂದಿಗೆ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಪ್ರಶ್ನೆಗಳನ್ನು ಜಾಗರೂಕತೆಯಿಂದ ಉತ್ತರಿಸಬೇಕು. ಆದಕ್ಕೆ ಸೂಚನೆಗಳನ್ನು ಕೊಡಲಾಗಿದೆ.

# ಅತಿ ಮುಖ್ಯವಾಗಿ:

ನಿಮ್ಮ ಪಾಠಗಳನ್ನು ಸಂಪೂರ್ಣವಾಗಿ ಓದಿಕೊಳ್ಳಿ,
* ಅತಿಕಷ್ಟವಾದ ಪಾಠಗಳನ್ನು ಪರೀಕ್ಷೆಗೆ ಒಂದು ವಾರದ ಒಳಗೆ ಅರ್ಥಮಾಡಿಕೊಳ್ಳಲು ಪ್ರಯತ್ನಿಸಿ
* ಪಠ್ಯ / ಪಾಠದಲ್ಲಿರುವ ಪ್ರತಿ ವಾಕ್ಯವೂ ಬಹುಮುಖ್ಯ. ವಾಕ್ಯಗಳೇ ಪ್ರಶ್ನೆಗಳಾಗಿ ಬರಬಹುದು.
* ಪರೀಕ್ಷಾ ಸಮಯದಲ್ಲಿ ತುಂಬಾ ಕಷ್ಟವಾದುದನ್ನು ಓದಲು ಪ್ರಯತ್ನಿಸಬೇಡಿ
* ನಿಮ್ಮ ಆಲೋಚನೆಗಳು / ಪರಿಕಲ್ಪನೆಗಳನ್ನು ತರ್ಕಬದ್ಧವಾಗಿ ಒಗ್ಗೂಡಿಸಲು ಯತ್ನಿಸಿ.
* ಪಾಠದಲ್ಲಿರುವ ವಾಕ್ಯಗಳನ್ನು ಹಲಗೆಯಲ್ಲಿ ಪುನಃ ಜೋಡಿಸಿ ಅದನ್ನು ಅರ್ಥಮಾಡಿಕೊಳ್ಳಿ
* ಮನನ ಮಾಡಬೇಕಾದ ಪದ್ಯಗಳನ್ನು ಆದಷ್ಟು ಶೀಘ್ರವಾಗಿ ಮನನ ಮಾಡಿಕೊಳ್ಳಿ
*ನಕ್ಷೆಗಳು / ಚಿತ್ರಗಳು/ ನಕ್ಷೆ ಅಥವಾ ಚಿತ್ರದ ಭಾಗಗಳನ್ನು ಪ್ರಶ್ನೆಗಳಾಗಿ ಪರಿವರ್ತಿಸಿ ಕೇಳಬಹುದು. ಆದ್ದರಿಂದ ಎಲ್ಲ ವಿವರಗಳನ್ನೂ ಮನನ ಮಾಡಿಕೊಳ್ಳಿ

**ಪ್ರಶ್ನೆಪತ್ರಿಕೆ ವಿನ್ಯಾಸಃ** ಪ್ರಶ್ನೆಪತ್ರಿಕೆಯಲ್ಲಿ ಬಹು ಅಂಶ ಆಯ್ಕೆ ಪ್ರಶ್ನೆಗಳು, ಬಿಟ್ಟ ಸ್ಥಳಗಳನ್ನು ತುಂಬುವುದು, ಹೊಂದಿಸಿ ಬರೆಯಿರಿ, ಸಣ್ಣ ಉತ್ತರದ ಪ್ರಶ್ನೆಗಳು ಹಾಗೂ ಪ್ರಬಂಧರೂಪದ ಪ್ರಶ್ನೆಗಳಿಗರುತ್ತವೆ. ಪ್ರತಿ ರೂಪದ ಪ್ರಶ್ನೆಯನ್ನು ವ್ಯವಸ್ಥಿತ ರೀತಿಯಲ್ಲಿ ಉತ್ತರಿಸಬೇಕು.

**ಬಹು ಅಂಶ ಆಯ್ಕೆ ಪ್ರಶ್ನೆಗಳು**

ವಿದ್ಯಾರ್ಥಿಗಳ ಅರ್ಥಮಾಡಿಕೊಳ್ಳುವ ಸಾಮರ್ಥ್ಯವನ್ನು ಈ ಪ್ರಶ್ನೆಗಳು ಪರೀಕ್ಷಿಸುತ್ತವೆ. ಇವುಗಳನ್ನು ಹೇಗೆಂದರೆ ಹಾಗೆ ಉತ್ತರಿಸಲಾಗದು. ಉತ್ತರಗಳನ್ನು ಊಹಿಸಿ ಬರೆಯುವುದು ಅಥವಾ ಸುಮ್ಮನೆ ಬೇಕಾಬಿಟ್ಟಿಯಾಗಿ ಉತ್ತರಿಸುವುದರಿಂದ ಒಳ್ಳೆಯ ಅಂಕಗಳು ಸಿಗಲಾರವು ಎಂಬುದನ್ನು ನೆನಪಿನಲ್ಲಿಡುವುದು ಸೂಕ್ತ. ಈ ಬಗೆಯ ಪ್ರಶ್ನೆಗಳನ್ನು ಉತ್ತರಿಸಿ ಗರಿಷ್ಠ ಅಂಕಗಳನ್ನು ಪಡೆಯಲು ನೀವು ಕೆಲ ಕ್ರಮಗಳನ್ನು ಅನುಸರಿಸಲೇಬೇಕು
* ನೀಡಲಾಗಿರುವ ಬಹು ಆಯ್ಕೆಯ ಪ್ರಶ್ನೆಗಳನ್ನು ಜಾಗರೂಕತೆಯಿಂದ ಓದಿ ಅರ್ಥಮಾಡಿಕೊಳ್ಳಿ
* ಪ್ರಶ್ನೆ ಏನನ್ನು ಕೇಳುತ್ತಿದೆ ಎನ್ನುವುದನ್ನು ಮನಸ್ಸಿನಲ್ಲಿ ಕಲ್ಪಿಸಿಕೊಳ್ಳಿ
* ಇದನ್ನು ಗಮನದಲ್ಲಿರಿಸಿಕೊಂಡೇ ಎಲ್ಲಾ ಆಯ್ಕೆಯ ಉತ್ತರಗಳನ್ನೂ ಓದಿ. ನಿಮ್ಮ ಮನದಲ್ಲಿನ ಪ್ರಶ್ನೆಗೆ ಯಾವ ಉತ್ತರ ಸರಿಹೊಂದುವುದೋ ಅದನ್ನು ಉತ್ತರವೆಂದು ಆಯ್ಕೆ ಮಾಡಿ.
*ಮೇಲಿನ ಎಲ್ಲವೂ / ಮೇಲಿನ ಯಾವುದೂ ಅಲ್ಲ ಎಂಬ ಆಯ್ಕೆ ಸೂಚಿಸಿರುವ ಉತ್ತರಗಳಲ್ಲಿದ್ದರೆ. ಆ ಪ್ರಶ್ನೆಗಳನ್ನು ಉತ್ತರಿಸುವ ಮುನ್ನ ಇನ್ನಷ್ಟು ಎಚ್ಚರವಹಿಸಿ.
* ನೀವು ಸುಲಭವಾಗಿ ಉತ್ತರಿಸಬಹುದಾದ ನಿಮಗೆ ಖಚಿತ ಉತ್ತರ ಗೊತ್ತಿರುವ ಪ್ರಶ್ನೆಗಳನ್ನು ಮೊದಲು ಉತ್ತರಿಸಿ.
* ಇನ್ನೊಮ್ಮೆ ಓದಿ ಅರ್ಥಮಾಡಿಕೊಳ್ಳಬೇಕು ಎಂದೆನಿಸಿದ ಪ್ರಶ್ನೆಗಳಿಗೆ ನಂತರ ಬನ್ನಿ. ಎಚ್ಚರದಿಂದ ಉತ್ತರಿಸಿ.

* ತುಂಬ ಕಷ್ಟವಾದ ಬಹು ಆಯ್ಕೆ ಹೊಂದಿರುವ ಪ್ರಶ್ನೆಗಳನ್ನು ಕಡೆಯಲ್ಲಿ ಉತ್ತರಿಸಿ. ಯಾವುದೇ ಪ್ರಶ್ನೆಯನ್ನು ಉತ್ತರಿಸದೇ ಬಿಡಬೇಡಿ.

* ಉತ್ತರಿಸುವ ಮುಂಚೆ ಚೆನ್ನಾಗಿ ಆಲೋಚಿಸಿ. ಒಮ್ಮೆ ಬರೆದ ಉತ್ತರವನ್ನು ತಿದ್ದುವುದಾಗಲೀ ಅಥವಾ ಹೊಡೆದು ಹಾಕುವುದಾಗಲೀ ಮಾಡಕೂಡದು. ಒಂದು ಸಲ ಮಾತ್ರ ಉತ್ತರಿಸಬೇಕು ಆದ್ದರಿಂದ ಚೊಕ್ಕವಾಗಿ ಒಂದೇ ಸಲ ಉತ್ತರಿಸಿ ಉತ್ತರಕ್ಕೆಂದು ನೀಡಿರುವ ಅಕ್ಷರವನ್ನು ಅಲ್ಲಿ ನೀಡಿರುವ ಉತ್ತರ ಸ್ಥಳದಲ್ಲಿ ಸರಿಯಾದ ಉತ್ತರದೊಂದಿಗೆ ಸ್ಪಷ್ಟವಾಗಿ ಬರೆಯಿರಿ.

**ಚಿಕ್ಕದಾದ /ದೊಡ್ಡದಾದ ಪ್ರಶ್ನೆಗಳು**

*ಈ ಭಾಗದಲ್ಲಿ ಚಿಕ್ಕ ಉತ್ತರಗಳು ಮತ್ತು ಸ್ವಲ್ಪ ದೀರ್ಘವಾದ ಉತ್ತರಗಳನ್ನು ಬರೆಯಬೇಕಾದ ಪ್ರಶ್ನೆಗಳಿರುತ್ತವೆ.

* ಮುಖ್ಯಾಂಶಗಳನ್ನು ಬಿಡದೆ ಚಿಕ್ಕದಾಗಿ ಉತ್ತರಿಸಬಲ್ಲ ಸಾಮರ್ಥ್ಯವನ್ನು ಪರೀಕ್ಷಿಸುತ್ತವೆ.

* ನಕ್ಷೆ / ಚಿತ್ರಗಳನ್ನು ಬರೆದು ಭಾಗಗಳನ್ನು ಗುರುತಿಸುವಲ್ಲಿ ನಿಮಗಿರುವ ಪರಿಣಿತಿಯನ್ನು ಈ ಪ್ರಶ್ನೆಗಳು ಪರೀಕ್ಷಿಸುತ್ತವೆ.

* ನಿಮ್ಮ ಉತ್ತರಗಳನ್ನು ಪೂರ್ಣಗೊಂಡ ವಾಕ್ಯಗಳಲ್ಲಿ ಬರೆಯಿರಿ.

* ಸರಿಯಾದ ವಾಕ್ಯಾರ್ಥಕ ಚಿಹ್ನೆಗಳನ್ನು ಉಪಯೋಗಿಸಿ. (ವಿರಾಮ, ಅಲ್ಪವಿರಾಮ!? ಇತ್ಯಾದಿ)

ಚೊಕ್ಕದಾಗಿ ಸ್ಪಷ್ಟವಾಗಿ ಕಾಣುವಂತೆ ಬರೆಯಿರಿ. ಬೇರೆ ಬೇರೆ ವಿಷಯಗಳಲ್ಲಿ ಹೇಗೆ ಉತ್ತರಿಸಬೇಕು ಎನ್ನುವ ಕುರಿತು ಕೆಲ ಅಂಶಗಳನ್ನು ಇಲ್ಲಿ ವಿವರಿಸಿದೆ, ಗಮನಿಸಿ.

**ಗಣಿತ:**

* ಹೇಳಿಕೆ ರೂಪದ ಪ್ರಶ್ನೆಗಳಿರುತ್ತವೆ. ಪ್ರಶ್ನೆಯನ್ನು ಎಚ್ಚರದಿಂದ ಓದಿ ಯಾವ ಉತ್ತರ ಕಂಡುಹಿಡಿಯಬೇಕು ಎನ್ನುವುದನ್ನು ಅರ್ಥಮಾಡಿಕೊಳ್ಳಿ,

* ಸರಿಯಾದ ಸೂತ್ರ ಯಾವುದು ಎಂದು ನಿರ್ಧರಿಸಿ

* ಸೂತ್ರದಲ್ಲಿ ಬರುವ ಚರಾಂಶಗಳಿಗೆ ಸರಿಯಾದ ಬೆಲೆಗಳನ್ನು ಆದೇಶಿಸಿ

*ಗುಣಾಕಾರ ಮತ್ತಿತರ ಮೂಲ ಕ್ರಿಯೆಗಳನ್ನು ಮಾಡುವಾಗ ಎಚ್ಚರಿಕೆ ವಹಿಸಿ (ಸಾಮಾನ್ಯವಾಗಿ ನೀವು ತಪ್ಪುವುದು ಇಲ್ಲೇ. ಅದನ್ನು ಸಿಲ್ಲಿ ಮಿಸ್ಟೇಕ್ ಅಂತ ನೀವೆಂದುಬಿಟ್ಟರೂ ಲೆಕ್ಕದ ಉತ್ತರ ತಪ್ಪು ಆಗುವುದರಿಂದ ಎಚ್ಚರ ವಹಿಸಿ)

*ಲೆಕ್ಕಗಳನ್ನು ಮಾಡುವಾಗ ವರ್ಕಿಂಗ್ ಕಾಲಂನ್ನು ಸರಿಯಾಗಿ ಬಳಸಿಕೊಳ್ಳಿ, ಉದಾಹರಣೆಗೆ ಎಂಬ ಸಂಖ್ಯೆಗಳನ್ನು ಉತ್ತರ ಪತ್ರಿಕೆಯ ಮುಖ್ಯ ಭಾಗದಲ್ಲಿ ಸುಲಭೀಕರಿಸಲು ಪ್ರಯತ್ನಿಸಬೇಡಿ.

* ಸ್ಕೇಲ್ ಡ್ರಾಯಿಂಗ್, ನಕ್ಷಾ ಸಮಸ್ಯೆಗಳು, ಸಮೀಕರಣದ ನಕ್ಷೆಗಳು ಇತರ ಲೆಕ್ಕಗಳನ್ನು ಈ ಭಾಗದಲ್ಲಿ ನೀಡಲಾಗುತ್ತದೆ.

* ಲೆಕ್ಕದ ಉತ್ತರವನ್ನು ಸ್ಪಷ್ಟವಾಗಿ ಬಾಕ್ಸ್ ಮಾಡಿ ಬರೆಯಿರಿ. ಉದಾಹರಣೆಗೆ ನಿಮಗೆ ಉತ್ತರ=7 ಎಂದು ಬಂದಿದ್ದಲ್ಲಿ =7 ಎಂದು ಬರೆಯಿರಿ.

*ನೀವು ಎಷ್ಟು ಉತ್ತರಿಸುತ್ತೀರೋ ಅದಕ್ಕೆ ತಕ್ಕಂತೆ ಅಂಕಗಳು ದೊರೆಯುತ್ತದೆ. ಯಾವುದೋ ಲೆಕ್ಕ ಬರಲಿಲ್ಲ ಎಂದು ಬಿಟ್ಟು ಬಿಡಬೇಡಿ. ಏನು ತಿಳಿದಿರುತ್ತದೆಯೋ ಅದನ್ನು ಬರೆಯಿರಿ.

**ವಿಜ್ಞಾನ :**

* ಇಲ್ಲಿ ನಿರ್ದಿಷ್ಟ ಪ್ರಶ್ನೆಗಳಿರುತ್ತವೆ. ಸರಿಯಾದ ನೇರ ಉತ್ತರವನ್ನು ಉತ್ತರಿಸುವಲ್ಲಿ ನೀವು ಸಮರ್ಥರಾಗಬೇಕು.

* ಎರಡು ಉಪಯೋಗಗಳು / ದೋಷಗಳು / ಪ್ರಯೋಜನಗಳು / ಕಾರಣಗಳನ್ನು ಬರೆಯಿರಿ ಎಂದು ಪ್ರಶ್ನೆಯಿರುವಾಗ ಮುಖ್ಯವಾದ ಎರಡನ್ನು ಮಾತ್ರ ಬರೆಯಿರಿ. ಹೆಚ್ಚು ಬರೆಯುವ ಅವಶ್ಯಕತೆಯಿಲ್ಲ.

- 
- 
- 
- **ಸಮಾಜ ವಿಜ್ಞಾನ :**

*ಪ್ರಮುಖ ಅಂಶಗಳನ್ನು ಎದ್ದು ಕಾಣುವಂತೆ ಬರೆಯಿರಿ. ಒಂದೇ ವಿಷಯವನ್ನು ಅನಾವಶ್ಯಕವಾಗಿ ಪುನಃ ಪುನಃ ವಿವರಿಸುವ ಗೋಜಿಗೆ ಹೋಗಬೇಡಿ.

*ನಕ್ಷೆಗಳನ್ನು ಬರೆದು ಅಲ್ಲಿ ಸ್ಥಳಗಳನ್ನು ಗುರುತಿಸುವ ಅಭ್ಯಾಸ ಮಾಡಿಕೊಳ್ಳಿ

* ಚಿಕ್ಕ ಸ್ಪಷ್ಟ ಚಿತ್ರ ಬರೆಯಿರಿ ಎಂದು ಪ್ರಶ್ನೆಯಲ್ಲಿ ಕೇಳಿದ್ದರೆ ಸ್ಪಷ್ಟ ಚಿತ್ರ ಬರೆಯಿರಿ. ಕೇಳಿದ್ದಲ್ಲಿ ಭಾಗಗಳನ್ನು ಗುರುತಿಸಿ.

- 

**ಭಾಷೆಗಳು :**

* ಸುಂದರ ಕೈಬರಹದ ಕಡೆ ಗಮನಕೊಡಿ. ವ್ಯಾಕರಣ, ವಾಕ್ಯ ರಚನೆ ಮತ್ತು ವಾಕ್ಯಾರ್ಥಕ ಚಿಹ್ನೆಗಳ ಕುರಿತು ಎಚ್ಚರ ವಹಿಸಿ.

* ನಿಮ್ಮ ಉತ್ತರಗಳು ಚಿಕ್ಕದಾಗಿರಲಿ, ಸ್ಪಷ್ಟವಾಗಿರಲಿ.

* ಪೆಲಿಂಗ್ ಮತ್ತು ಕಾಗುಣಿತಕ್ಕೆ ಹೆಚ್ಚು ಗಮನಕೊಡಿ. ಇವೆರಡೂ ಸರಿಯಿರುವಂತೆ ಎಚ್ಚರವಹಿಸಿ.

- 
- 
- 
- 
- **ವಿದ್ಯಾರ್ಥಿಗಳೇ ಇವುಗಳ ಬಗ್ಗೆ ಎಚ್ಚರವಹಿಸಿ :**

•
•
*ಬಳಸುವ ಪೆನ್ನು, ಪೆನ್ಸಿಲ್ಲು, ರಬ್ಬರು, ಉತ್ತಮ ಮಟ್ಟದ್ದಾಗಿರಲಿ (ಒಂದಕ್ಕಿಂತ ಹೆಚ್ಚು ಒಂದೇ ರೀತಿಯ ಪೆನ್ನು, ಪೆನ್ಸಿಲ್‌ಗಳನ್ನು ಇಟ್ಟುಕೊಳ್ಳಿ). ಈ ಎಲ್ಲವನ್ನು ಸರಿಯಾದ ಒಂದು ಪೆಟ್ಟಿಗೆಯಲ್ಲಿ ಇಟ್ಟುಕೊಳ್ಳಿ,

* ನಿಮಗಿಂತ ಧೈರ್ಯ ಕಳೆದುಕೊಂಡಿರುವ ವಿದ್ಯಾರ್ಥಿಗಳಿಂದ ದೂರವಿರಿ.

*ನಿಮ್ಮಲ್ಲಿ ನೀವೇ ಧೈರ್ಯ ತುಂಬಿಕೊಳ್ಳಿ, ನನ್ನಿಂದ 'ಇದು ಸಾಧ್ಯ' ಎಂದು ಮನಗಾಣಿ.

*ಪರೀಕ್ಷಾ ಕೊಠಡಿಗೆ ತೆರಳುವ ಮುನ್ನ ಹಾಗೂ ತೆರಳಿದ ನಂತರ ಆತ್ಮಸ್ಥೈರ್ಯವನ್ನು ಕಳೆದುಕೊಳ್ಳದಿರಿ.

*ನಿಮ್ಮ ಕ್ರಮ ಸಂಖ್ಯೆಯನ್ನು(ರಿಜಿಸ್ಟರ್ ನಂಬರ್) ಸರಿಯಾಗಿ, ಸರಿಯಾದ ಸ್ಥಳದಲ್ಲಿ ಬರೆಯಿರಿ.

* ಪ್ರಶ್ನೆಪತ್ರಿಕೆ ಕೈಗೆ ಸಿಕ್ಕೊಡನೇ ಉತ್ತರಿಸಬೇಡಿ.

*ಎಲ್ಲಾ ಪ್ರಶ್ನೆಗಳನ್ನೂ ಒಮ್ಮೆ ಸಂಪೂರ್ಣವಾಗಿ ಓದಿ.

*ಉತ್ತರಿಸಲು ಆತುರಪಡಬೇಡಿ.

*ಅಕ್ಷರಗಳು, ಚಿತ್ರಗಳು ಸಂದರವಾಗಿರುವಂತೆ ಚಿತ್ತು ಮಾಡದೇ ಅಚ್ಚುಕಟ್ಟಾಗಿ ಬರೆಯಿರಿ.

*ಕಾಗುಣಿತ ಹಾಗೂ ಸ್ಪೆಲ್ಲಿಂಗ್‌ನ ಬಗ್ಗೆ ಅತಿ ಹೆಚ್ಚಿನ ಗಮನವಿರಲಿ.

*ಸಾಲುಗಳು ನೇರವಾಗಿ, ಸಮಾನಾಂತರವಾಗಿರುವಂತೆ ಬರೆಯಿರಿ.

*ವಾಕ್ಯಗಳು ಸಂಪೂರ್ಣವಾಗಿದ್ದು, ವ್ಯಾಕರಣಬದ್ಧವಾಗಿರಲಿ.

*ಯಾವ ಪ್ರಶ್ನೆಗೆ ನಿಖರವಾದ ಉತ್ತರಗೊತ್ತಿರುತ್ತದೆಯೋ ಅದೇ ಪ್ರಶ್ನೆಯನ್ನು ಮೊದಲು ಉತ್ತರಿಸಿ.

*ಯಾವುದಾದರೂ ಪ್ರಶ್ನೆಗೆ ಉತ್ತರ ಗೊತ್ತಾಗದಿದ್ದಲ್ಲಿ, ಸಮಯವನ್ನು ವ್ಯರ್ಥ ಮಾಡದೇ, ಆ ಪ್ರಶ್ನೆಯನ್ನು ಬಿಟ್ಟು ಮುಂದಿನ ಪ್ರಶ್ನೆಗೆ ಉತ್ತರಿಸಿ ಬಿಟ್ಟ ಪ್ರಶ್ನೆಯನ್ನು ಎಲ್ಲಾ ಪ್ರಶ್ನೆಗಳನ್ನು ಉತ್ತರಿಸಿದ ಮೇಲೆ ಉತ್ತರಿಸಿ ಅಥವಾ ಯಾವಾಗ ನಿಮಗೆ ಉತ್ತರ ನೆನಪು ಬರುವುದೋ ಆಗ ಉತ್ತರಿಸಿ.

*ಪ್ರಶ್ನೆಗಳಿಗೆ ಉತ್ತರಿಸುವಾಗ ಅಕ್ಕಪಕ್ಕದವರು ಉತ್ತರಿಸುವುದನ್ನು ನೋಡಬೇಡಿ.

*ಯಾವ ಪ್ರಶ್ನೆಯನ್ನೂ ಉತ್ತರಿಸದೇ ಬಿಟ್ಟು ಬರಬೇಡಿ. ಎಲ್ಲಾ ಪ್ರಶ್ನೆಗಳನ್ನೂ ಉತ್ತರಿಸಿ.

*ಪರೀಕ್ಷೆ ಮುಗಿಯುವುದಕ್ಕಿಂತ ಐದು ನಿಮಿಷ ಮುಂಚಿತವಾಗಿ ಎಲ್ಲಾ ಉತ್ತರಗಳನ್ನೂ ಬರೆಯುವ ಅಭ್ಯಾಸ ಬೆಳಸಿಕೊಳ್ಳಿ,

*ನೀವು ಬರೆದಿರುವ ಉತ್ತರಗಳನ್ನು ಪುನಃ ಪರಿಶೀಲಿಸಿ.

*ಉತ್ತರ ಪತ್ರಿಕೆಗಳನ್ನು ಸರಿಯಾದ ಕ್ರಮದಲ್ಲಿ ಜೋಡಿಸಿ ಬಲವಾಗಿ ಕಟ್ಟಿ

*ಒಂದು ಪತ್ರಿಕೆಯಲ್ಲಿ ಉತ್ತರಿಸಿದ ಮೇಲೆ ಅದರ ಚಿಂತೆಯನ್ನು ಬಿಟ್ಟು ಮುಂದಿನದನ್ನು ಅಭ್ಯಾಸಮಾಡಿ.

**ಪೋಷಕರಿಗೆ ಕೆಲ ಸಲಹೆಗಳು :**

*ಪ್ರತಿಯೊಂದು ಮಗು ಕೂಡ ವಿಶಿಷ್ಟ. ಪ್ರತಿ ಮಗುವಿನ ಗುಣವೂ ಬೇರೆ. ಯಾವಾಗಲೂ ಇತರ ಮಕ್ಕಳೊಂದಿಗೆ ನಿಮ್ಮ ಮಕ್ಕಳನ್ನು ಹೋಲಿಸಬೇಡಿ.

*ನಿಮ್ಮ ಮಗುವಿನ ಭೌತಿಕ ಅವಶ್ಯಕತೆಗಳೇನು ? ಅವನ / ಳ ಆಗತ್ಯಗಳೇನು ? ಆ ಮಗುವಿನ ಮಾನಸಿಕ ಸ್ಥಿತಿಯೇನು ? ಎಂಬುದನ್ನು ಅರ್ಥಮಾಡಿಕೊಳ್ಳಲು ಯತ್ನಿಸಿ.

*ಮಕ್ಕಳಿಗೆ ಇಷ್ಟವಿಲ್ಲದಾಗ ಅವರನ್ನು ಓದು ಎಂದು ಬಲವಂತ ಮಾಡಬೇಡಿ. ಒಂದು ಗುರಿ ಕೊಟ್ಟು ಅದನ್ನು ಅಂದೇ ಸಾಗಿಸಲು ಹೇಳಿ.

*ದಿನದ ನಿಶ್ಚಿತ ಸಮಯದಲ್ಲಿ ಓದು / ಬರಹ ಮಾಡಲೇಬೇಕಾದುದು ಅತ್ಯಂತ ಅವಶ್ಯ ಎನ್ನುವ ಅಂಶವನ್ನು ನಿಮ್ಮ ಮಕ್ಕಳಿಗೆ ಮನದಟ್ಟು ಮಾಡಿಕೊಡಿ.

*ಯಾವಾಗಲೂ ಮಕ್ಕಳೊಂದಿಗೆ ಸಕಾರಾತ್ಮಕವಾಗಿ ಮಾತನಾಡಿ. ನಕಾರಾತ್ಮಕವಾಗಿ ಆಡುವ ಮಾತು ದುಷ್ಪರಿಣಾಮ ಬೀರಬಹುದು.

*ಮಕ್ಕಳ ಓದಿನ ವಿಷಯದಲ್ಲಿ ಸಮಸ್ಯೆಗಳು ಬಂದಾಗ ಮಕ್ಕಳನ್ನೂ ಜೊತೆಗಿರಿಸಿಕೊಂಡು ಶಿಕ್ಷಕರನ್ನು ವೈಯಕ್ತಿಕವಾಗಿ ನೀವೇ ಭೇಟಿಮಾಡಿ.

*ಮಕ್ಕಳಿಗೆ ''ನಿಮ್ಮಲ್ಲಿ ಕಲಿಯುವ ಸಾಮರ್ಥ್ಯ ಇದೆ'' ಎಂಬ ಆತ್ಮವಿಶ್ವಾಸ ತುಂಬಿ.

*ಪರೀಕ್ಷೆಯ ಸಮಯದಲ್ಲಿ ಹೆಚ್ಚು ಕಾಲ ಮಕ್ಕಳೊಂದಿಗಿರಿ.

*ಆಗಿಂದಾಗ್ಗೆ ಅವರನ್ನು ಮಾತನಾಡಿಸಿ, ಪ್ರೀತಿಸಿ ಗೊಣಗಬೇಡಿ.

*ತಂದೆ ತಾಯಿ ಇಬ್ಬರೂ ಒಂದೇ ರೀತಿಯಾದ ಮಾರ್ಗದರ್ಶನವನ್ನು ಕೊಡಿ.

*ಪರೀಕ್ಷೆಯಿಂದ ಬರುತ್ತಿದ್ದಂತೆ ಎಲ್ಲಾ ಪ್ರಶ್ನೆಗಳಿಗೂ ಉತ್ತರಗಳನ್ನು ಹೇಳಿಸಲು ಪ್ರಯತ್ನಿಸಬೇಡಿ.

*ಯಾವುದಾದರೂ ವಿಷಯದಲ್ಲಿ ನಿಮ್ಮ ಮಗ / ಮಗಳು ಸರಿಯಾಗಿ ಉತ್ತರಿಸದಿದ್ದಲ್ಲಿ, ಮುಂದಿನ ಪರೀಕ್ಷೆಯಲ್ಲಿ ಸರಿಯಾಗಿ ಉತ್ತರಿಸುವುದಕ್ಕೆ ಉತ್ತೇಜಿಸಿ.

- **ಆಹಾರ ಅಭ್ಯಾಸಃ**

*** ಹೆಚ್ಚಾಗಿ ಕಾಫಿ, ಟೀ ಸೇವನೆ ಮಾಡಬೇಡಿ.**

***ಹೊರಗಡೆಯಿಂದ ತಂದ ತಿಂಡಿ ಪದಾರ್ಥಗಳನ್ನು ಹೆಚ್ಚಾಗಿ ತಿನ್ನಬೇಡಿ**

***ಹಣ್ಣು , ತರಕಾರಿಗಳನ್ನು ಸರಿಪ್ರಮಾಣದಲ್ಲಿ ಬಳಸಿ.**

**ಕಡೆಯಲ್ಲಿ ಒಂದು ಮಾತು. ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ಎದುರಿಸುವುದು, ಜಯಶೀಲರಾಗುವುದು ಒಂದು ದೊಡ್ಡ ಸಾಹಸವೇನಲ್ಲ. ತಾಳ್ಮೆಯಿಂದ, ಸರಿಯಾಗಿ ವ್ಯವಸ್ಥೆ ಮಾಡಿಕೊಂಡು ತಯಾರಾದಲ್ಲಿ ಖಂಡಿತ ಜಯಶೀಲರಾಗುವಿರಿ.**

**ಎಸ್.ಎಸ್.ಎಲ್.ಸಿ. ಪರೀಕ್ಷೆಗಿಂತಲೂ ಮುಖ್ಯವಾದದ್ದು ಜೀವನ ಪರೀಕ್ಷೆ. ಕಷ್ಟವನ್ನು ಸಹಿಸಿ, ನಗುನಗುತ್ತಾ ಬಾಳುವುದನ್ನು ಕಲಿಯಿರಿ. ನೀವೂ ನೋವುಂಟುಮಾಡಿಕೊಳ್ಳಬೇಡಿ. ಬೇರೆಯವರಿಗೂ ನೋವನ್ನು ಕೊಡಬೇಡಿ.**

***ಡಾ.॥ ಹೆಚ್.ಎಸ್. ಗಣೇಶ ಭಟ್ಟ**